<u>ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ</u>

ಸಿ.ಸಿ. ನಂಬ್ರಃ **199/2024**
ಸಿ.ಡಬ್ಲ್ಯೂ- **6**
ಪಿ.ಡಬ್ಲ್ಯೂ- **5**

| | | |
|---|---|---|
| ಸಾಕ್ಷಿದಾರರ ಹೆಸರು | : | ಬ್ರಿಜೇಶ್ ವಿನಯ್ ಕುಮಾರ್ |
| ತಂದೆಯ ಹೆಸರು | : | ಆರ್ ಎಸ್ ಅಮ್ಮಣ್ಣ |
| ಪ್ರಾಯ | : | 57 ವರ್ಷ |
| ಉದ್ಯೋಗ | : | ಎ.ಸಿ.ಎಫ್. ಹಳಿಯಾಳ |
| ವಾಸ | : | ಹಳಿಯಾಳ |

ದಿನಾಂಕಃ 01-12-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನಾನು 2014 ರಿಂದ 2017 ರವರೆಗೆ ವಲಯ ಅರಣ್ಯಾಧಿಕಾರಿಯಾಗಿ ಶಂಕರನಾರಾಯಣ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನ್ನ ಪ್ರಭಾರಕ್ಕೆ ಬಂದ ದಾಖಲೆಗಳನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿ ಅಭಿಯೋಜನೆಯವರು ಹಾಜರು ಪಡಿಸಿದ ಹೆಂಗವಳ್ಳಿ ಗ್ರಾಮದ ಸರ್ವೆ ನಂಬ್ರ 146, ಬೆಳ್ವೆ ಗ್ರಾಮದ ಸರ್ವೆ ನಂಬ್ರ 92 ಇದರಲ್ಲಿರುವ ಅರಣ್ಯ ಪ್ರದೇಶಗಳನ್ನು ಸುರಕ್ಷಿತ ಅರಣ್ಯವೆಂದು ಘೋಷಣೆ ಮಾಡಿದ ಡಿಜಿಟಲ್ ಪ್ರತಿಯ ಸುತ್ತೋಲೆಯನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಡಿಜಿಟಲ್ ಪ್ರತಿಯ ನಕಾಶೆಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಟಿ ಬಿ ಎಸ್ ವಕೀಲರಿಂದಃ</u>

1. ಒಟ್ಟಾರೆ ತಕಾರಾರು ಇರುವುದು ಗಡಿಗೆ ಸಂಬಂದಫಟ್ಟಂತೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಮೀಸಲು ಅರಣ್ಯ ಭೂಮಿ ಹಾಗೂ ತಾಗಿ ಇರುವ ಖಾಸಗಿ ಜಾಗ ಆರೋಪಿಗೆ ಸೇರುವಂತಹ ಖಾಸಗಿ ಭೂಮಿಗೆ ಸಂಬಂಪಟ್ಟಂತೆ ಕರ್ನಾಟಕ ಉಚ್ಚ ನ್ಯಾಯಲಯವು ಕಂದಾಯ ಇಲಾಖೆ ಹಾಗೂ ಅರಣ್ಯ ಇಲಾಖೆಯವು ಸೇರಿ ಜಂಟಿ ಸರ್ವೆ ಮಾಡಬೇಕೆಂದು ಜಿಲ್ಲಾಧಿಕಾರಿ

ಉಡುಪಿಗೆ ಆದೇಶಿಸಿದ್ದು, ಜಿಲ್ಲಾಧಿಕಾರಿಯವರು ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆ ಯವರಿಗೆ ಮೀಸಲು ಅರಣ್ಯ ಹಾಗೂ ಅದಕ್ಕೆ ತಾಗಿ ಇರುವ ಖಾಸಗಿ ಭೂಮಿಗೆ ಸಂಬಂಧಪಟ್ಟಂತೆ ಜಂಟಿ ಸರ್ವೆ ಮಾಡಿ ಗಡಿ ನಿರ್ದರಿಸುವಂತೆ ಆದೇಶಿಸಿರುತ್ತಾರೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಆದೇಶ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಆ ನಂತರದಲ್ಲಿ ಆದೇಶ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ನನ್ನ ಅವಧಿಯಲ್ಲಿ ಜಂಟಿ ಸರ್ವೆ ಆದದ್ದೆ ಇಲ್ಲ, ಜಂಟಿ ಸರ್ವೆ ಆದೇಶ ನನ್ನ ಗಮನಕ್ಕೆ ಬಂದಿರುವುದಿಲ್ಲ. ಮೀಸಲು ಅರಣ್ಯ ಒಟ್ಟು 1232.87 ಎಕರೆ ಇರುತ್ತದೆ. ಸರ್ವೆ ನಂಬ್ರ 146 ರ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಬ್ರ 146 ರಲ್ಲಿ ಕಂದಾಯ ಭೂಮಿಯು ಇದೆ, ಖಾಸಗಿಯವರ ಭೂಮಿಯು ಇದೆ ಎಂದರೆ ಸಾಕ್ಷಿ ಕಂದಾಯ ಭೂಮಿಯೂ ಇದೆ, ಅರಣ್ಯ ಇಲಾಖೆಯ ಭೂಮಿಯು ಇದೆ ಹಾಗೂ ಖಾಸಗಿಯವರಿಗೆ ಮಂಜೂರು ಆದ ಭೂಮಿ ಸಹ ಇರುತ್ತದೆ ಎಂದು ನುಡಿಯುತ್ತಾರೆ.

3. ಮೂಲ ಸರ್ವೆ ನಂಬ್ರ 146 ರಲ್ಲಿ ಒಂದಂಶವನ್ನು ಆರೋಪಿತ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಅಲ್ಲಿ ಆರೋಪಿಯ ರೆಸಾರ್ಟ್ ಹಾಗೂ ಖಾಸಗಿ ಭೂಮಿ ಇರುತ್ತದೆ ಎಂದರೆ ಸಾಕ್ಷಿ ಅರಣ್ಯ ಭೂಮಿಯ ಲಗತ್ತಿಗೆ ಅವರ ಭೂಮಿ ಇರುತ್ತದೆ ಎಂದು ನುಡಿಯುತ್ತಾರೆ. ಸಾವಿರಾರು ಎಕರೆ ಇರುವ ಭೂಮಿಯಲ್ಲಿ ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಖಾಸಗಿಯವರ ಜಮೀನಿನವರಿಗೆ ಫ್ಲೋಟಿಂಗ್ ಆಗಿತ್ತಾ ಎಂದರೆ ಸಾಕ್ಷಿ ಅರಣ್ಯ ಇಲಾಖೆಯವರ ಭೂಮಿಯನ್ನು ನಾವು ಗುರುತಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

4. ಸಾವಿರಾರು ಎಕರೆ ಇರುವಂತಹ ಭೂಮಿಯಲ್ಲಿ ಫ್ಲೋಟಿಂಗ್ ಆಗದೇ ನಿಖರವಾಗಿ ಗಡಿಗಳನ್ನು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ಫಾರೆಸ್ಟ್ ಸೆಟ್ಲಮೆಂಟ್ ಆಫೀಸರ್ ಈ ಸುತ್ತೋಲೆ ಹೊರಡಿಸುವ ಸಮಯದಲ್ಲಿ ಅಳತೆ ಮಾಡಿ ನಕಾಶೆ ತಯಾರಿಸಿ ಸ್ಥಳದಲ್ಲಿ ಅರಣ್ಯ ಭೂಮಿ ಎಂದು ಗುರುತಿಸಿದ್ದರು ಎಂದು ನುಡಿಯುತ್ತಾರೆ. ಅರಣ್ಯ ಇಲಾಖೆ ಆಗಲಿ ಅಥವಾ ಬೇರೆ ಇಲಾಖೆಯವರಾಗಲೀ ಈ ರೀತಿಯಾಗಿ ಸರ್ವೆ ನಂಬ್ರ 146 ರಲ್ಲಿ ಯಾವುದೇ ಅಳತೆ ಕಾರ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

5. ಯಾವುದೇ ಪುರಾವೆ ಹಾಗೂ ದಾಖಲೆಗಳನ್ನು ನೋಡಿದೆ ನಾನು ಸುಳ್ಳು ದೋಷಾರೋಪಣೆ

ಪಟ್ಟಿಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ